**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.640/2023**

ಪಿ.ಡಬ್ಲ್ಯೂ.1

ದಿನಾಂಕ 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಆರೋಪಿಯ ಪರ ವಕೀಲರಿಂದಃ**

ನಿಪಿ-7 ರ ಪ್ರಕಾರ ಹಣವನ್ನು ನಾನು ಆರೋಪಿಯ ಖಾತೆಗೆ ಹಾಕಿರುತ್ತೇನೆ. ಆರೋಪಿಯ ಖಾತೆಯ ಸಂಖ್ಯೆಃ 416 ರ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರು ಮಾಡಿಲ್ಲ. ನಿಪಿ-8 ಅನ್ನು ಸಾಲ ಕೊಡುವ ಉದ್ದೇಶಕ್ಕಾಗಿ ಬರೆಸಿಕೊಂಡಿರುತ್ತೇನೆ. ನಿಪಿ-7 ಮತ್ತು 8 ರ ಕುರಿತು ನಮ್ಮ ಕಾನೂನುಬದ್ದ ನೋಟಿಸ್ಸಿನಾಗಲೀ ಅಥವಾ ಪಿರ್ಯಾದಿಯಲ್ಲಾಗಲೀ ನಮೂದು ಮಾಡಿರುವುದಿಲ್ಲ ಎಂದರೆ ಸರಿ . ನಿಪಿ-9 ರಂತೆ ಇರುವ ಸಾಲದ ಅರ್ಜಿಯನ್ನು ಯಾರು ಸಾಲ ಪಡೆದುಕೊಳ್ಳುತಿರೋ ಅವರೇ ತುಂಬಿ ಕೊಡಬೇಕು ಎಂದರೆ ಸಾಕ್ಷಿಯು ನಾವು ಸಹ ಸದರಿ ಅರ್ಜಿಯನ್ನು ತುಂಬಬಹುದು ಎಂದು ನುಡಿಯುತ್ತಾರೆ. ನಿಪಿ-9 ಅರ್ಜಿಯನ್ನು ಸಾಲದ ಪಡೆದೆಯುವವರು ತನಗೆ ತುಂಬಲು ಬರುವುದಿಲ್ಲ ಅಂದಾಗ ಮಾತ್ರ ನಾವು ತುಂಬಬಹುದು ಎಂದರೆ ಹೌದು. ನಿಪಿ-9 ಅನ್ನು ಸಾಕ್ಷಿಗೆ ತೋರಿಸಿ ವ್ಯವಸ್ಥಾಪಕ ಶಿಫಾರಸ್ಸು ಖಾಲಿ ಇರುತ್ತದೆ ಎಂದರೆ ಸಾಕ್ಷಿಯ ನಿಪಿ-9 ಅನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ವ್ಯವಸ್ಥಾಪಕ ಶಿಫಾರಸ್ಸು ಮಾಡಿದ ನಂತರ ಇದರ ಆಧಾರದ ಮೇಲೆ ಇನ್ನೊಂದು ಪತ್ರವನ್ನು ಬರೆಸಿಕೊಳ್ಳುತ್ತೇವೆ ಎಂದರೆ ಸರಿ . ನಿಪಿ-10 ರಲ್ಲಿ ಆರೋಪಿಯು ಯಾವ ಊರಿನವರು ಎಂದು ಎಲ್ಲಿಯಾ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-10 ಅನ್ನು ನೋಡಿ ಹೌದು ಎಲ್ಲಿ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಾಲವನ್ನು ಕೊಡುವ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರಿಂದ ಜಾಮೀನುದಾರನೆಂದು ತೆಗೆದುಕೊಂಡು ಅರ್ಜಿದಾರರಿಗೆ ಸಾಲವನ್ನು ಕೊಡಲಾಗುತ್ತದೆ ಎಂದರೆ ಹೌದು. ನಿಪಿ-9 ರಲ್ಲಿ ನಮೂದಿಸಿದ ಖಲೀದಿ ಮುಲ್ಲಾ ಹಾಗೂ ಅಸಲಾಂ ಶೇಕ್ ರವರು ನಮ್ಮ ಬ್ಯಾಂಕಿನ ಸದಸ್ಯರಿದ್ದು ಅವರ ಹೆಸರನ್ನು ನಿಪಿ-9 ರಲ್ಲಿ ನಮೂದು ಮಾಡಿರುತ್ತೇವೆ. ಸದರಿಯವರಿಬ್ಬರೂ ನಮ್ಮ ಬ್ಯಾಂಕಿನ ಸದಸ್ಯರು ಅಂತ ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ . ಸದರಿಯವರಿಬ್ಬರದು ಯಾವುದೇ ಆಧಾರ ಕಾರ್ಡ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ .

2. ಸುಲಭ ಸಾಲವನ್ನು 25 ಸಾವಿರದಿಂದ 1 ಲಕ್ಷ ರೂಪಾಯಿಯವರೆಗೆ ಕೊಡಲಾಗುತ್ತದೆ. ಸುಲಭ ಸಾಲ ಕೊಡುವಾಗ ಸಾಲಗಾರನು ಯಾವ ವ್ಯಾಪಾರ ಮಾಡುತ್ತಾನೆ ಎಂಬ ದಾಖಲಾತಿಗಳನ್ನು ಪರಿಶೀಲಿಸಿ ಸಾಲವನ್ನು ಕೊಡಲಾಗುತ್ತದೆ ಎಂದರೆ ಹೌದು. ಸಾಲ ತೆಗೆದುಕೊಳ್ಳುವ ಬಗ್ಗೆ ಖಬುಲಾತಿ ನಮೂನೆಯಲ್ಲಿ ಎಷ್ಟು ಸಾಲ ನೀಡಿಲಾಗಿದೇ, ಎಷ್ಟು ಬಡ್ಡಿ ನಿರ್ಧರಿಸಲಾಗಿದೆ ಹಾಗೂ ಸಾಲವನ್ನು ಮರಳಿ ಕೊಡುವ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಹೌದು. ನಿಪಿ-7 ರಿಂದ 12 ದಾಖಲಾತಿಗಳನ್ನು ನಾನು ಈ ಪೂರ್ವದಲ್ಲಿ ಹೇಳಿದ ಸಾಕ್ಷಿಗೆ ಪೂರಕವಾಗಲೀ ಎಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರ ಜೊತೆಗೆ ಲಗತ್ತಿಸಿದ ಜಾಮೀನು ಭದ್ರತೆಯ ಸಾಲ ಖಬುಲಾತಿ ಪತ್ರದಲ್ಲಿ ಆರೋಪಿಯ ಭಾವಚಿತ್ರವು ಇಲ್ಲ ಹಾಗೂ ಗ್ರಾಹಕರ ಸಂಖ್ಯೆಯೂ ನಮೂದಿಸಿಲ್ಲ ಎಂದರೆ ಹೌದು. ನಿಪಿ-9 ಮತ್ತು 10 ಅನ್ನು ನಮ್ಮ ಅನುಕೂಲ ಸಲುವಾಗಿ ಆರೋಪಿಯು ಯಾವುದೇ ಸಹಿಗಳನ್ನು ಮಾಡದೇ ಇದ್ದರು ಸಹ ನಾವು ಆರೋಪಿಯ ಸಹಿಯನ್ನು ಮಾಡಿ ಖೊಟ್ಟಿಯಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ರಿಂದ 12 ಎಲ್ಲಾ ದಾಖಲಾತಿಗಳು ಮುಧೋಳ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘಕ್ಕೆ ಸಂಬಂಧಪಟ್ಟಿದು ಎಂದರೆ ಹೌದು. ಆರೋಪಿಯು ಮುಧೋಳ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದಿಂದ ಯಾವುದೇ ಸಾಲವನ್ನು ಬಟಾವಣೆ ಮಾಡಿರುವುದಿಲ್ಲ ಹಾಗೂ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮುಧೋಳ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದಿಂದ ಸಾಲವನ್ನು ಪಡೆದುಕೊಂಡಿದ್ದ ಹಾಗೂ ಸದರಿ ಸಾಲವನ್ನು ಬಡ್ಡಿ ಸಮೇತವಾಗಿ ವಾಪಸ್ಸು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚೆಕ್ ಸಂಖ್ಯೆಃ 140823 ಅನ್ನು ಬಿಡಿಸಿಸಿ

ಬ್ಯಾಂಕಿನಲ್ಲಿ ಹಾಜರುಪಡಿಸಲಾಗಿತ್ತು . ಸದರಿ ಚೆಕ್ಕನ್ನು ಸದರಿ ಬ್ಯಾಂಕಿನಲ್ಲಿ ಹಾಜರುಪಡಿಸಿಲ್ಲ , ಅದರಂತೆ ಸದರಿ ಬ್ಯಾಂಕಿನವರು ದಿಃ 11-04-2023 ರಂದು ಮೋಮೋವನ್ನು ನೀಡಿರುವುದ್ಲಿ ಎಂದರೆ ಸರಿಯಲ್ಲ. ನಿಪಿ-3 ಪ್ರಸ್ತುತ ಪ್ರಕರಣಕ್ಕೆ ಬಾಧ್ಯತೆ ಆಗುವುದಿಲ್ಲ ಎಂದರೆ ಸರಿಯಲ್ಲ. ದಿಃ 13-06-2018 ರಂದು ಸಾಲವನ್ನು ಮಂಜೂರು ಮಾಡಿದ್ದು , ದಿಃ 13-06-2019 ರಂದು ಸದರಿ ಸಾಲ ಮರುಪಾವತಿಬೇಕಾಗಿದ್ದು , ಆರೋಪಿಯ ಒಂದು ವರ್ಷದೊಳಗೆ ಸಾಲ ಮರುಪಾವತಿಸಿಲ್ಲ ಎನ್ನಲು ನಾವು ಆರೋಪಿಗೆ ನಾವು ಆರೋಪಿಗೆ ಕಾನೂನುಬದ್ದ ನೋಟೀಸ್ಸನ್ನು ನೀಡಿಲ್ಲ ಎಂದರೆ ಹೌದು. ಆದರೆ ಮೌಖಿಕವಾಗಿ ಹೇಳಿದ್ದೇವೆ ಎಂದು ನುಡಿಯುತ್ತಾರೆ. ದಿಃ 13-06-2019 ರಿಂದ ಮೂರು ವರ್ಷ ಅವಧಿಯಾಳಗೆ ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿಲ್ಲ ಹಾಗೂ ಯಾವುದೇ ನೋಟೀಸ್ಸನ್ನು ನೀಡಿಲ್ಲ ಎಂದರೆ ಹೌದು. ನಮ್ಮ ಸಾಲದ ಅವಧಿ ಮುಗಿದಿದ್ದರು ಸಹ ಆರೋಪಿಗೆ ತೊಂದರೆ ನೀಡಿಬೇಕೆಂಬ ದುರುದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.